**(ಇಂದು ತಾಃ 04-12-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ ಎಂ ಟಿ ಎನ್ ವಕೀಲರಿಂದ,**

4. ದಿ.15.10.2024 ರಂದು ನಿಪಿ.2 ಚೆಕ್ ನ್ನು ನಮಗೆ ನೀಡಿದ ಬಗ್ಗೆ ದಾಖಲಾತಿ ಇರುವುದಿಲ್ಲ. ಚೆಕ್ಕೆ ದಾಖಲಾತಿ ಆಗಿರುತ್ತದೆ. ನಿಪಿ.2 ಚೆಕ್ಕಿನಲ್ಲಿರುವ ಸಹಿ ಮಾಡಿದ ಬರವಣಿಗೆ ಮತ್ತು ಇತರ ಬರವಣಿಗೆಗಳ ನಡುವೆ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.2 ಚೆಕ್ಕಿನಲ್ಲಿ ಸಹಿ ಮಾಡಿದ ಪೆನ್ನಿನ ಶಾಯಿ ಇತರೆ ಬರವಣಿಗೆಗಳನ್ನು ಬರೆದ ಪೆನ್ನಿನ ಶಾಯಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಸಾಲದ ಖಾತೆಗೆ ಯಾವುದೇ ಹಣ ಮರುಪಾವತಿಸಿರುವುದಿಲ್ಲ. ಪಿರ್ಯಾದಿ ಸೊಸೈಟಿಯಲ್ಲಿ ಕೈಬರಹದಲ್ಲಿ ಸಾಲದ ಖಾತೆಯನ್ನು ನಿರ್ವಹಣೆ ಮಾಡುವುದಿಲ್ಲ ಗಣಕಯಂತ್ರದಲ್ಲಿ ಮಾತ್ರ ನಿರ್ವಹಣೆ ಮಾಡುತ್ತೇವೆ. ಸುಮಾರು 10 ವರ್ಷಗಳಿಂದ ಗಣಕಯಂತ್ರದಲ್ಲಿ ನಿರ್ವಹಣೆ ಮಾಡುತಿದ್ದೇವೆ. ಸಾಲ ಕಟ್ ಬಾಕಿ ಆದ ನಂತರ ಸಾಲದ ಜಾಮೀನು ದಾರರಿಗೆ ನೋಟಿಸು ನೀಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸದೇ ಇರಲು ಯಾವುದೇ ವಿಶೇಷ ಕಾರಣ ಇರುವುದಿಲ್ಲ. ಚೆಕ್ ಅಮಾನ್ಯಗೊಂಡ ನಂತರ ನೀಡಿದ ನೋಟಿಸು ಆರೋಪಿ ಸ್ವೀಕರಿಸದೇ ವಾಪಸ್ಸಾಗಿರುತ್ತದೆ. ಆರೋಪಿಯಿಂದ ಪಡೆದ ನಿಶ್ಚಿತ ಠೇವಣಿ ಮೊತ್ತವನ್ನು ಸಾಲದ ಖಾತೆಗೆ ಜಮಾ ಮಾಡಿರುತ್ತೇವೆ. ಆ ರೀತಿ ಜಮಾ ಮಾಡುವಾಗ ಆರೋಪಿಗೆ ತಿಳಿಸಿರುತ್ತೇವೆ. ಆ ಬಗ್ಗೆ ಆರೋಪಿಯ ಸಹಿಯನ್ನು ಪಡೆದುಕೊಂಡಿರುತ್ತೇವೆ.

5 . ಆರೋಪಿ ಬೇರೆಯವರ ಸಾಲಕ್ಕೆ ಜಾಮೀನು ಆದ ಬಗ್ಗೆ ಈಗ ನೆನಪಿಲ್ಲ. ಈ ಪ್ರಕರಣದಲ್ಲಿ ಆರೋಪಿಗೆ ನಗದು ಉದ್ದರಿ ಸಾಲ ನೀಡಿರುತ್ತೇವೆ. ಸಾಲ ಕಟ್ ಬಾಕಿ ಆದ ಬಗ್ಗೆ ಆರೋಪಿಗೆ ನೋಟಿಸನ್ನು ನೀಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಯು ಸಾಲವನ್ನು ಸಂಪೂರ್ಣವಾಗಿ ಚುಕ್ತಾ ಮಾಡಿರುತ್ತಾನೆಂದರೆ ಸರಿಯಲ್ಲ. ನಿಪಿ.2 ಚೆಕ್ ನ್ನು ಸಾಲದ ದಾಖಲಾತಿಯಾಗಿ ಇತರೆ ಸಾಲದ ದಾಖಲಾತಿಗಳ ಜೊತೆಗೆ ಆರೋಪಿಯಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.2 ಚೆಕ್ ನ್ನು ಆರೋಪಿ ವಿರುದ್ಧ ಸುಳ್ಳು ಚೆಕ್ ಪ್ರಕರಣ ದಾಖಲಿಸುವ ಉದ್ದೇಶಕ್ಕಾಗಿಯೇ ಸಾಲ ಮಂಜೂರಿಯ ಪೂರ್ವದಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.2 ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಸಾಲದ ಹಣವನ್ನು ಸಂಪೂರ್ಣವಾಗಿ ಪಾವತಿಸಿದ್ದರೂ ಸಹ ಹೆಚ್ಚಿನ ಹಣ ಪಡೆಯುವ ದುರುದ್ದೇಷದಿಂದ ಈ ಸುಳ್ಳು ಪ್ರಕರಣವನ್ನು ಚೆಕ್ಕಿನಲ್ಲಿ ನಮಗೆ ಬೇಕಾದ ಮೊತ್ತವನ್ನು ನಮೂದಿಸಿ ದಾಖಲಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಿಂದ 12 ದಾಖಲಾತಿಗಳನ್ನು ಈ ಕೇಸಿಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯಿಂದ ಸಾಲ ನೀಡುವ ಸಂದರ್ಭದಲ್ಲಿ ಪಡೆದುಕೊಂಡಂತಹ ನಿಶ್ಚಿತ ಠೇವಣಿ ಮತ್ತು ಶೇರು ಮೊತ್ತವನ್ನು ಆರೋಪಿಗೆ ವಾಪಸ್ಸು ನೀಡಲು ನಾವೇ ಭಾಧ್ಯರಿರುತ್ತೇವೆ ಎಂದರೆ ಸರಿಯಲ್ಲ. ನಿರ್ದೇಶಕರ ಮಂಡಳಿಯವರು ಆರೋಪಿಯ ವಿರುದ್ಧ ದೂರು ದಾಖಲಿಸಲು ನನಗೆ ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿರ್ದೇಶಕರ ಮಂಡಳಿಯವರ ಗಮನಕ್ಕೆ ತರದೆ ಈ ಪ್ರಕರಣ ಆರೋಪಿಯ ವಿರುದ್ಧ ನಾನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸು ಆರೋಪಿಗೆ ಜಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಆರೋಪಿಗೆ ನ್ಯಾಯಾಲಯದ ಸಮನ್ಸ್ ಜಾರಿ ಆದ ಮೇಲೆ ತಿಳಿದುಬಂತು ಎಂದರೆ ಸರಿಯಲ್ಲ. ಆರೋಪಿ ಸಂಪೂರ್ಣವಾಗಿ ಸಾಲ ಮರುಪಾವತಿಸಿದ್ದರು ಸಹ ಮುಗ್ಧ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಅನ್ಯಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ**

ಹೆಚ್ಚುವರಿ ನ್ಯಾ.ದಂ.,

ಭಟ್ಕಳ.